ತಾರೀಖು 21ನೇ ಆಗಸ್ಟ್ 1896.

ನಂ. 2070.—ರೆ. ಫೈ. 24—96, ಮೈಸೂರ್ ಸರ್ವಿಸ್ ರೆಗ್ಯುಲೇಷ್ಗಳ 188ನೇ ಆರ್ಟಿಕಲ್ ಅನುಸರಿಸಿ, ಷಿಕಾರಿಪುರ ತಾಲ್ಲೂಕು ಅಮಲ್ದಾರ್ ಕುಂದಾಪುರ ಸುಬ್ಬರಾಯರಿಗೆ, 1896ನೇ ಆಗಸ್ಟ್ 18ನೇ ಮರ್ಕ್ಯಂ ಲಾಗಾಯತು ಯಾ ಅವರು ಉಪಯೋಗಿಸಿಕೊಳ್ಳುವ ಇತರ ತಾರೀಖಿನಾರಭ್ಯ ಒಂದು ತಿಂಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

ಶಿವಮೊಗ್ಗ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮ್ಮಿಷನರ್ ಆಫಿಸ್ ರೆವಿನ್ಯೂ ಹೆಡ್ ಮುನಷಿ ಬಾಲಕೃಷ್ಣರಾಯರು ಸದರೀ ಕುಂದಾಪುರ ಸುಬ್ಬರಾಯರು ರಜಾದ ಮೇಲಿರುವ ಕಾಲದಲ್ಲಿ ಯಾ ಮತ್ತೊಂದು ಹುಕುಂ ಕೊಡುವ ಪರಿಯಂತ ಷಿಕಾರಿಪುರದ ತಾಲ್ಲೂಕಿನ ಅಮಲ್ದಾರ್ ವ 3ನೇ ಕ್ಲಾಸ್ ಮೂಜಿಸ್ಟ್ರೇಟರಾಗಿ ಆಕ್ಟಿಂಗ್ ತರೀಕ್ ಮೊಕರರ್ರಾಡಲ್ಪಟ್ಟಿರುತ್ತಾರೆ.

ತಾರೀಖು 24ನೇ ಆಗಸ್ಟ್ 1896.

ನಂ. 2075.—ರೆ. 760, ಮೈಸೂರ್ ಸರ್ವಿಸ್ ರೆಗ್ಯುಲೇಷ್ಗಳ 172ನೇ ಆರ್ಟಿಕಲ್ ಅನುಸರಿಸಿ, ಹಾಸನ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮ್ಮಿಷನರ್ ಮೆಸ್ಸರ್ ಏ. ಕೃಷ್ಣಸ್ವಾಮಯ್ಯಂಗಾರ್ರಿಗೆ ಮಾಹೆಮಜಕೂರು 21ನೇ ತಾರೀಖಿನ ಲಾಗಾಯತು ಹತ್ತು ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತೆ.

2. ಸೀನಿಯರ್ ಅಸಿಸ್ಟೆಂಟ್ ಕಮ್ಮಿಷನರವರು ಸದರೀ ಮೆಸ್ಸರ್ ಏ. ಕೃಷ್ಣಸ್ವಾಮಯ್ಯಂಗಾರ್ರು ರಜಾದ ಮೇಲಿರುವ ಕಾಲದಲ್ಲಿ ಯಾ ಮತ್ತೊಂದು ಹುಕುಂ ಕೊಡುವ ಪರಿಯಂತ ಸದರೀ ಡಿಸ್ಟ್ರಿಕ್ಟಿನ ಚಾರ್ಜಿನಲ್ಲಿರತಕ್ಕದ್ದು.

ನಂ. 2079.—ರೆ. 764, ಹಾಲಿ ಬೆಂಗಳೂರು ಡಿಸ್ಟ್ರಿಕ್ಟಿಗೆ ಕೇರಿದ ಪ್ರೊಬೇಷನೆರಿ ಅಸಿಸ್ಟೆಂಟ್ ಕಮ್ಮಿಷನರ್ ಮೆಸ್ಸರ್ ಎಂ. ಶಾಮರಾವ್, ಎಂ. ಏ., ಯವರು ಮೈಸೂರು ಡಿಸ್ಟ್ರಿಕ್ಟಿಗೆ ಹಂಗಾಮಿಯಾಗಿ ವರ್ಗ ಮಾಡಲ್ಪಟ್ಟಿರುತ್ತಾರೆ.

ನಂ. 2126.—ರೆ. ಫೈ. 29—26, ಮೈಸೂರ್ ಸರ್ವಿಸ್ ರೆಗ್ಯುಲೇಷ್ಗಳ 171ನೇ ಆರ್ಟಿಕಲ್ ಅನುಸರಿಸಿ, ಕಂಟ್ರೋಲರಿಗೆ ಚೀಫ್ ಅಸಿಸ್ಟೆಂಟರಾದ ಮೆಸ್ಸರ್ ಜೆ. ಆರ್. ಬ್ಯಾರೋಯವರಿಗೆ, 1896ನೇ ಆಗಸ್ಟ್ 14ನೇ ತಾರೀಖು ಲಾಗಾಯತು ಎರಡು ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿತ್ತು.

ನಂ. 2128.—ರೆ. ಫೈ. 125—95, ಮೈಸೂರ್ ಸರ್ವಿಸ್ ರೆಗ್ಯುಲೇಷ್ಗಳ 171ನೇ ಆರ್ಟಿಕಲ್ ಅನುಸರಿಸಿ, ತರೀಕೆರೆ ತಾಲ್ಲೂಕಿನ ಅಮಲ್ದಾರ್ ಎಸ್. ಸುಬ್ಬರಾಯರಿಗೆ, 1896ನೇ ಆಗಸ್ಟ್ 13ನೇ ತಾರೀಖಿನಾರಭ್ಯ ಯಾ ಅವರುಪಯೋಗಿಸಿಕೊಳ್ಳುವ ಇತರ ತಾರೀಖಿನ ಲಾಗಾಯತು ಮೂರು ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿತ್ತು.

2. ತಾಲ್ಲೂಕು ಶಿರಸ್ತೇದಾರ್ರು, ಸದರೀ ತಾಲ್ಲೂಕಿನ ಅಮಲ್ದಾರ್ರು ರಜಾದ ಮೇಲಿರುವ ಕಾಲದಲ್ಲಿ ಯಾ ಮತ್ತೊಂದು ಹುಕುಂ ಕೊಡುವ ಪರಿಯಂತ ಸದರೀ ತಾಲ್ಲೂಕಿನ ಚಾಲ್ತಿ ಕೆಲಸಗಳ ಚಾರ್ಜಿನಲ್ಲಿ ಇದ್ದರು.

ತಾರೀಖು 26ನೇ ಆಗಸ್ಟ್ 1896.

ನಂ. 2236.—ರೆ. ಫೈ. 141—95, ಅರಸೀಕೆರೆ ತಾಲ್ಲೂಕಿನ ಅಮಲ್ದಾರ್ ಎ. ವೀರರಾಘವಲು ನಾಯಡು ಯವರು, ಅವರಿಗೆ 1896ನೇ ಜೂ 9ನೇ ಮರ್ಕ್ಯಂ 10674.—ರೆ. 4216ನೇ ನಂ. 26ನೇ ಮರ್ಕ್ಯಂ 11207.—ರೆ. ಫೈ. 141—95ನೇ ನಂ. ಮತ್ತು ಜುಲೈ 24ನೇ ಮರ್ಕ್ಯಂ 957.—ರೆ. ಫೈ. 141—95ನೇ ನಂ. ಗವರ್ಮೆಂಟ್ ಇಸ್ತಿಹಾರ್ನಾಮೆಗಳಲ್ಲಿ ಕೊಡಲ್ಪಟ್ಟಿದ್ದ ಮೂರು ತಿಂಗಳ ಪ್ರಿವಿಲೀಜ್ ರಜಾ 1896ನೇ ಜೂ 2ನೇ ತಾರೀಖು ಲಾಗಾಯತು ಉಪಯೋಗಿಸಿಕೊಂಡು, 1896ನೇ ಆಗಸ್ಟ್ 13ನೇ ಮರ್ತು ಮಿನ ಮಧ್ಯಾನ್ಹಾತ್ಪರ ಕೆಲಸಕ್ಕೆ ಹಾಪಸ್ ಬಂದಿರುತ್ತಾರಾಗಿ, ಉಪಯೋಗಿಸಿಕೊಳ್ಳದ ರಜಾ ಭಾಗವು ಇದರಿಂದ ರದ್ದುಮಾಡಲ್ಪಟ್ಟಿರುತ್ತೆ.

ಹುಕುಂ ಬಮೋಜೀಬ್,
ಏ. ಶ್ರೀನಿವಾಸಯ್ಯಂಗಾರ್, ಜನರಲ್ ವ ರೆವಿನ್ಯೂ
ಇಲಾಖೆಗಳ ಗವರ್ಮೆಂಟ್ ಸೆಕ್ರೆಟರಿ.

ಮಿ ಲಿ ಟೆ ರಿ.

ಇಸ್ತಿಹಾರ್.

ತಾರೀಖು 25ನೇ ಆಗಸ್ಟ್ 1896.

ಮೈಸೂರ ಪೈದಲ್ ಫೂಜಿನ 3ನೇ ಪಟಾಲಮಿನಲ್ಲಿ ಈ ಕೆಳಗೆ ಕಂಡ ಬಡ್ತಿಯು, 1896ನೇ ಆಗಸ್ಟ್ ಗುರ್ರೇ ಲಾಗಾಯತು ಮಾಡಲ್ಪಟ್ಟಿರುತ್ತೆ:—

ಹುಚ್ಚಾ, 1ನೇ ಗ್ರೇಡ್ ಜವಾನ್ದಾರಿಯಿಂದ 2ನೇ ಗ್ರೇಡ್ ಸುಬೇದಾರಿಗೆ.

ಹುಕುಂ ಬಮೊ ಜೀಬ್,
ಏ. ಎಚ್. ವೆಕ್ಕ್ಟಿಟ್ಟೈರ್, ಲೆಫ್ಟಿನೆಂಟ್ ಕರ್ನಲ್,
ಮಿಲಿಟರಿ ಸೆಕ್ರೆಟರಿ.